ಎಂದು ಕರೆಯುತ್ತೇನೆ. ಉಳಿದವರೆಲ್ಲ ದುರಾತ್ಮರು" (**ಕೃತಿಶ್ರೇಣಿ**, ಸಂ.೫, ಪು.೫೮). "ನನ್ನ ದೇವರು ಪಾಪಿಗಳು. ನನ್ನ ದೇವರು ದುಃಖಿಗಳು. ಎಲ್ಲ ಜನಾಂಗಗಳ, ಎಲ್ಲ ಜಾತಿಯ ದರಿದ್ರರೆ ನನ್ನ ದೇವರು. ಅವರೇ ನನ್ನ ವಿಶೇಷ ಪೂಜಾಮೂರ್ತಿಗಳು" (**ಕೃತಿಶ್ರೇಣಿ**, ಸಂ.೫, ಪು.೧೩೭).

ಈಗ ಯೋಚನಾಶಕ್ತಿಯುಳ್ಳ ಪ್ರಾಣಿ, ಮನಸ್ಸುಳ್ಳ ಮನುಷ್ಯ ದೇವರು ಎಲ್ಲಿದ್ದಾನೆ, ಅವನನ್ನು ಪೂಜಿಸುವುದು ಪ್ರಾರ್ಥಿಸುವುದು, ಭಕ್ತಿ ಮಾಡುವುದು ಎಂದರೆ ಏನು? ಹೇಗೆ? ಎಂಬುದನ್ನು ಅರಿಯಲಿ. ಸ್ವಾಮಿ ವಿವೇಕಾನಂದರು ಮೇಲೆ ಹೇಳಿದ ಆ ದೇವರನ್ನು ಪ್ರೀತಿಸುವುದೆ, ನಾರದರಭಕ್ತಿಸೂತ್ರದ ಪ್ರಹ್ಲಾದನ ನವವಿಧ ಭಕ್ತಿಯನ್ನು ಮಾಡಿದಂತೆ! ಅದನ್ನು ಬಿಟ್ಟು ಬೀದಿ ಬೀದಿಯ ನಿರ್ಜೀವ ಕಲ್ಲು, ಮಣ್ಣು, ಮರದ ವಿಗ್ರಹಗಳ ಮುಂದೆ ನಿಂತು ಗಲ್ಲ ಬಡಿದುಕೊಳ್ಳುವುದಲ್ಲ. ಪ್ರೇಮ, ಪ್ರೇಮ, ಪ್ರೇಮ—ಸಕಲ ಚರಾಚರ ವಿಶ್ವಬ್ರಹ್ಮಾಂಡದಲ್ಲಿ ಪ್ರೇಮ. ಸದ್ಯದ ವಿಶ್ವಬ್ರಹ್ಮಾಂಡದ ಮಕುಟಮಣಿಯಾದ ಮನುಷ್ಯನ ಪ್ರೇಮ, ಜಗತ್‌ಪ್ರೇಮ ನಿಜವಾದ ಭಕ್ತಿ! ಅಂಥ ಭಕ್ತಿ ಮಾಡಿ. ಮಾನವನನ್ನು ಪ್ರೀತಿಸದೆ, ಸಕಲ ಜೀವರಾಶಿಯನ್ನು ಪ್ರೀತಿಸದೆ ಕೇವಲ ಗುಡಿಯಲ್ಲಿನ ವಿಗ್ರಹವನ್ನು ಪೂಜಿಸುವುದು ಯಾವ ಪ್ರಯೋಜನಕ್ಕೂ ಬಾರದು. ಕೇವಲ ವಿಗ್ರಹವೆ ದೇವರಲ್ಲ. ಆ ವಿಗ್ರಹದ ಹಿಂದಿರುವ ಭಗವತತ್ತ್ವವನ್ನು ಪ್ರೀತಿಸದೆ ಕೇವಲ ವಿಗ್ರಹಾರಾಧನೆಯೂ ಒಂದು ಜಡವಾದವೆ (materialism). ❄

**ಅನುಭಾವಿ ಬೌದ್ಧ ಸಂನ್ಯಾಸಿಯೊಬ್ಬನು ಪರಿವ್ರಾಜಕನಾಗಿ ಸುತ್ತುತ್ತಿರುವಾಗ ಒಮ್ಮೆ ಒಂದು ಆಶ್ರಮದಲ್ಲಿ ಆಶ್ರಯ ಪಡೆದನು. ರಾತ್ರಿ ಅಲ್ಲಿ ತಂಗಿರುವಾಗ ಚಳಿಯ ಬಾಧೆಯನ್ನು ಅವನಿಗೆ ತಡೆಯಲಾಗಲಿಲ್ಲ. ಹತ್ತಿರದಲ್ಲೇ ಒಂದು ಮರದಿಂದ ತಯಾರಿಸಿದ ಬುದ್ಧನ ವಿಗ್ರಹವಿತ್ತು. ಅವನು ಆ ವಿಗ್ರಹಕ್ಕೆ ಬೆಂಕಿ ಹೊತ್ತಿಸಿ ತನ್ನ ಚಳಿಯನ್ನು ಹೋಗಲಾಡಿಸಿಕೊಂಡನು.**

**ಬೆಂಕಿ ಉರಿಯುತ್ತಿರುವುದನ್ನು ಕಂಡು ಆಶ್ರಮದ ಬೇರೆ ಸಂನ್ಯಾಸಿಗಳು ಓಡಿಬಂದರು. ಆ ಅನುಭಾವಿಯು ಆರಾಮವಾಗಿ ಬೆಂಕಿ ಕಾಯಿಸಿಕೊಳ್ಳುತ್ತ ಕುಳಿತಿದ್ದನು. ಬುದ್ಧನ ವಿಗ್ರಹ ಉರಿಯುತ್ತಿರುವುದನ್ನು ನೋಡಿ ಆ ಸಂನ್ಯಾಸಿಗಳಿಗೆ ಕೋಪಾಶ್ಚರ್ಯಗಳೆರಡೂ ಒಮ್ಮೆಯೇ ಉಂಟಾದವು. "ಏ ಮೂರ್ಖ, ಎಂಥ ಕೆಲಸ ಮಾಡುತ್ತಿರುವೆ ನೀನು! ನೀನು ಬುದ್ಧನನ್ನು ಕೊಲ್ಲುತ್ತಿರುವೆಯಲ್ಲ!" ಎಂದು ಜೋರಾಗಿ ಅರಚಿಕೊಂಡರು.**

**ಅನುಭಾವಿಯು ಸ್ವಲ್ಪವೂ ವಿಚಲಿತನಾಗದೆ ಒಂದು ಕೋಲನ್ನು ತೆಗೆದುಕೊಂಡು ಕೆಂಡವನ್ನು ಕೆದಕತೊಡಗಿದನು. "ಏನು ಮಾಡುತ್ತಿರುವೆ?" ಎಂದು ಆ ಸಂನ್ಯಾಸಿಗಳು ಗುಡುಗಿದರು.**

**"ಏನಿಲ್ಲ, ನೀವು ಹೇಳಿದಿರಿ, ನಾನು ಬುದ್ಧನನ್ನು ಕೊಂದೆ ಎಂದು. ಅವನ ಎಲುಬುಗಳು ಸಿಗಬಹುದೊ ಎಂದು ನೋಡುತ್ತಿದ್ದೇನೆ!"** ❄

# ದೇವರನ್ನು ನೋಡಿದ್ದೀರಾ?

ಎನ್‌. ಕೃಷ್ಣಸ್ವಾಮಿ

*ಸ್ವಾಮಿ ವಿವೇಕಾನಂದರ ತಾರುಣ್ಯದಲ್ಲಿ ಕಾಡುತ್ತಿದ್ದ ಒಂದು ಪ್ರಮುಖವಾದ ಪ್ರಶ್ನೆಯ ಕೆಲವು ಮಜಲುಗಳನ್ನು ಪರಿಚಯಿಸಿರುವ ಶ್ರೀಯುತ ಎನ್‌. ಕೃಷ್ಣಸ್ವಾಮಿಯವರು ಬೆಂಗಳೂರಿನ ವಿವೇಕಾನಂದ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಗಳೂ ಹಾಗೂ ಆಶ್ರಮದ ನಿಕಟ ಭಕ್ತರೂ ಆಗಿದ್ದಾರೆ.*

## ನರೇಂದ್ರನ ಪ್ರಶ್ನೆ

ಯುವಕ ನರೇಂದ್ರ ತಾನು ಕಂಡ ಮಹಾತ್ಮರನ್ನೆಲ್ಲ ಒಂದು ಪ್ರಶ್ನೆ ಕೇಳುತ್ತಿದ್ದ. "ಮಹಾಶಯರೆ, ತಾವು ದೇವರನ್ನು ನೋಡಿದ್ದೀರಾ?" ಎಂಬ ಸರಳ ಪ್ರಶ್ನೆ ಅದು. ಆದರೆ ಈ ಪ್ರಶ್ನೆಗೆ ಸರಳವಾದ ಉತ್ತರ ಕೊಡುವವರು ಯಾರೂ ಅವನಿಗೆ ಸಿಗಲಿಲ್ಲ. ಕೊನೆಗೆ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರನ್ನೂ ಇದೇ ಪ್ರಶ್ನೆ ಕೇಳಿದ. ಅವರು ಅನಿರೀಕ್ಷಿತವಾದ ಉತ್ತರ ಕೊಟ್ಟರು: "ಹೌದು ನೋಡಿದ್ದೇನೆ. ನಿನಗೂ ಬೇಕಾದರೆ ತೋರಿಸುತ್ತೇನೆ. ಆದರೆ ದೇವರು ಯಾರಿಗೆ ಬೇಕು? ಜನರು ಹೆಂಡತಿ ಮಕ್ಕಳಿಗಾಗಿ, ಹಣಕ್ಕಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ಆದರೆ ದೇವರಿಗಾಗಿ ಅಳುವವರು ಯಾರು? ವ್ಯಾಕುಲತೆಯಿಂದ ಅವನ ದರ್ಶನ ಬೇಕೆಂದು ಅಳುವವರಿಗೆ ದೇವರು ಕಾಣಿಸಿಕೊಳ್ಳುತ್ತಾನೆ."

## ವೇದಾಂತದ ಉತ್ತರ

ವೇದಾಂತದ ಪ್ರಕಾರ ದೇವರನ್ನು ನೀವು ಎಲ್ಲಿಯೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ಅವನು ನಿಮ್ಮೊಳಗೇ ಇದ್ದಾನೆ. ವೇದಾಂತದಲ್ಲಿ ನಾಲ್ಕು ಮಹಾವಾಕ್ಯಗಳಿವೆ : **ಅಹಂ ಬ್ರಹ್ಮಾಸ್ಮಿ**—ಎಂದರೆ ನಾನೇ ಬ್ರಹ್ಮ, **ತತ್ತ್ವಮಸಿ**—ಎಂದರೆ ನೀನೇ ಬ್ರಹ್ಮ, **ಅಯಮಾತ್ಮಾ ಬ್ರಹ್ಮ**—ಈ ಆತ್ಮವೇ ಬ್ರಹ್ಮ ಮತ್ತು **ಪ್ರಜ್ಞಾನಂ ಬ್ರಹ್ಮ**—ಎಂದರೆ ಪ್ರಜ್ಞಾನವೇ ಬ್ರಹ್ಮ. ಸರಿಯಾದ ಅರಿವೇ ಬ್ರಹ್ಮ. ಪ್ರತಿಯೊಬ್ಬರಲ್ಲಿಯೂ ಇರುವ ಆತ್ಮನೇ ಬ್ರಹ್ಮ. ಇನ್ನೊಂದು ಮಹಾವಾಕ್ಯ ಇದೆ—**ಸರ್ವಂ ಖಲ್ವಿದಂ ಬ್ರಹ್ಮ**—ಈ ಜಗತ್ತು ಎಲ್ಲ ಬ್ರಹ್ಮ. ಸರಿಯಾದ ದೃಷ್ಟಿಯಿಂದ ನೋಡಿದರೆ ಎಲ್ಲೆಲ್ಲೂ ಬ್ರಹ್ಮ ಇರುತ್ತದೆ. ಬ್ರಹ್ಮ ಇಲ್ಲದಿರುವ ಸ್ಥಳವೇ ಇಲ್ಲ.

**ಟಾಲ್‌ಸ್ಟಾಯ್ ಕಥೆ—ಮನೆಗೆ ಬಂದ ದೇವರು.**

ರಷ್ಯದ ಮಹಾನ್ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಅನೇಕ ಬಹು ಸುಂದರವಾದ ಕಾದಂಬರಿಗಳನ್ನೂ ಸಣ್ಣಕಥೆಗಳನ್ನೂ ಪ್ರಬಂಧಗಳನ್ನೂ ಬರೆದಿದ್ದಾನೆ. ಇವುಗಳಲ್ಲಿ ಅನೇಕ ಕಥೆಗಳು ಈ ಪ್ರಶ್ನೆಯನ್ನು ಎದುರಿಸುತ್ತವೆ. ಇಲ್ಲಿ ಒಂದು ಕಥೆಯನ್ನು ನೆನಪು ಮಾಡಿಕೊಳ್ಳೋಣ. ಒಬ್ಬ ಮೋಚಿ ಒಂದು ಸಣ್ಣ ಕೋಣೆಯಲ್ಲಿ ವಾಸಿಸುತ್ತಿರುತ್ತಾನೆ. ಅವನು ರಸ್ತೆಯ ಕಡೆಗೆ ಇರುವ ಕಿಟಕಿಯ ಮೂಲಕ ಕಾಣುವ ಜಗತ್ತನ್ನು ನೋಡುತ್ತಾ ಅಲ್ಲಿಯೇ ಪಾದರಕ್ಷೆಗಳನ್ನು ಹೊಲಿಯುವ ಕೆಲಸ ಮಾಡುತ್ತಿರುತ್ತಾನೆ. ಪ್ರಾಮಾಣಿಕನಾದ ಮೋಚಿಗೆ ಒಂದು ರಾತ್ರಿ ಕನಸಿನಲ್ಲಿ ದೇವರು ಬಂದು "ನಾಳೆ ನಾನು ನಿನ್ನ ಮನೆಗೆ ಬರುತ್ತೇನೆ" ಎಂದು ಹೇಳುತ್ತಾನೆ.

ಆ ದಿನವೆಲ್ಲ ಮೋಚಿ ದೇವರ ನಿರೀಕ್ಷೆಯಲ್ಲಿಯೇ ಇರುತ್ತಾನೆ. ಯಾವಾಗ ಬರುವನೋ ಎಂದು ರಸ್ತೆಯನ್ನೇ ನೋಡುತ್ತಿರುತ್ತಾನೆ. ಬೆಳಗಿನಜಾವ ರಸ್ತೆ ಗುಡಿಸುವವನು ಅವನ ಕಣ್ಣಿಗೆ ಬೀಳುತ್ತಾನೆ. ಅವನು ಛಳಿಯಲ್ಲಿ ನಡುಗುತ್ತಿದ್ದ. ಮೋಚಿ ಅವನನ್ನು ಒಳಗೆ ಕರೆದು ಬಿಸಿಯಾದ ಚಹ ಕೊಟ್ಟು ಅವನನ್ನು ಬೆಚ್ಚಗೆ ಮಾಡಿ ಬೀಳ್ಕೊಡುತ್ತಾನೆ. ಅವನು ಧನ್ಯವಾದ ಹೇಳಿ ಮತ್ತೆ ರಸ್ತೆ ಗುಡಿಸಲು ಹೊರಡುತ್ತಾನೆ.

ದೇವರು ಯಾವಾಗ ಬಂದಾನು ಎಂದೇ ರಸ್ತೆಯನ್ನು ನೋಡುತ್ತಿದ್ದಾಗ ಒಂದು ಮಗುವಿನೊಡನೆ ಅದರ ತಾಯಿ ಕಾಣಿಸಿಕೊಳ್ಳುತ್ತಾಳೆ. ಮಗು ಅಳುತ್ತಿದೆ. ಇವರನ್ನೂ ಮೋಚಿ ಒಳಗೆ ಕರೆದು ಸತ್ಕರಿಸುತ್ತಾನೆ. ಮಗುವಿಗೆ ಬಿಸಿಹಾಲು ಕೊಡುತ್ತಾನೆ, ಅದನ್ನು ರಮಿಸಿ ನಗಿಸುತ್ತಾನೆ. ಸರಿಯಾದ ಬೆಚ್ಚಗಿನ ಬಟ್ಟೆಯಿಲ್ಲದ ತಾಯಿಗೆ ಒಂದು ಶಾಲು ಹೊದಿಸಿ ಕಳುಹಿಸುತ್ತಾನೆ.

ಸಂಜೆಯಾಗುತ್ತ ಬಂದಿತು. ಮೋಚಿ ಇನ್ನೂ ದೇವರ ನಿರೀಕ್ಷೆಯಲ್ಲೇ ಇರುತ್ತಾನೆ. ಆಗ ರಸ್ತೆಯಲ್ಲಿ ಗಲಾಟೆ. ಒಬ್ಬ ಹಣ್ಣು ಮಾರುವ ಮುದುಕಿ ಹುಡುಗನೊಬ್ಬನು ತನ್ನ ಗೂಡೆಯಿಂದ ಹಣ್ಣು ಕದಿಯುತ್ತಿದ್ದಾಗ ಅವನನ್ನು ಹಿಡಿಯುತ್ತಾಳೆ. ಅವನಿಗೆ ಏಟು ಕೊಡುತ್ತಾಳೆ. ಜಗಳ. ಮೋಚಿ ಅವರಿಬ್ಬರನ್ನೂ ತನ್ನ ಕೊಠಡಿಗೆ ಕರೆದು ಏನು ಜಗಳ ಎಂದು ವಿಚಾರಿಸುತ್ತಾನೆ. ಅವರಿಬ್ಬರಿಗೂ ಒಳ್ಳೆ ಮಾತು ಹೇಳುತ್ತಾನೆ. ಹುಡುಗನಿಗೆ ಕದಿಯಬಾರದು ಎಂದು ಬುದ್ಧಿ ಹೇಳುತ್ತಾನೆ. ಮುದುಕಿಗೆ "ಈ ಹುಡುಗ ನಿನ್ನ ಮೊಮ್ಮಗನ ಹಾಗೆ, ಅವನಿಗೆ ಒಂದು ಹಣ್ಣು ನೀನೇ ಕೊಡು" ಎಂದು ಕೊಡಿಸುತ್ತಾನೆ. ಅವರಿಬ್ಬರೂ ಪ್ರೀತಿಯಿಂದ ಹೊರಡುತ್ತಾರೆ. ಹುಡುಗ ಹಣ್ಣಿನ ಬುಟ್ಟಿಯನ್ನು ತಾನೇ ಹೊತ್ತುಕೊಂಡು ಮುದುಕಿಗೆ ಸಹಾಯ ಮಾಡುತ್ತಾನೆ.

ಅಂದು ರಾತ್ರಿ ಮತ್ತೆ ಕನಸಾಗುತ್ತದೆ. ದೇವರು ಮೋಚಿಗೆ ಹೇಳುತ್ತಾನೆ: "ನಾನು ಮೂರು ಸಲ ನಿನ್ನಲ್ಲಿಗೆ ಬಂದೆ. ಛಳಿಯಲ್ಲಿ ನಡುಗುತ್ತಿದ್ದ ನನಗೆ ನೀನು ಬಿಸಿ ಚಹ ಕೊಟ್ಟೆ. ಹೊದೆಯಲು ಬಟ್ಟೆ ಇಲ್ಲದ ನನಗೆ ನೀನು ಬೆಚ್ಚನೆ ಬಟ್ಟೆ ಹೊದಿಸಿದೆ. ಜಗಳ ಇದ್ದ ಕಡೆ ನೀನು ಸೌಹಾರ್ದವನ್ನು ಸ್ಥಾಪಿಸಿದೆ. ಹೀಗೆ ನೀನು ಮೂರೂ ಸಲ ನನ್ನನ್ನು ಯೋಗ್ಯವಾದ ರೀತಿಯಲ್ಲಿ ಸತ್ಕರಿಸಿದ್ದೀಯೆ. ನಾನು ನಿನ್ನ ಸೇವೆಯಿಂದ ಅತಿ ಪ್ರೀತನಾಗಿದ್ದೇನೆ," ಎಂದು ಹೇಳುತ್ತಾನೆ.

ಟಾಲ್‌ಸ್ಟಾಯ್ ಹೀಗೆ ಹೇಳುತ್ತಾನೆ: "ದೇವರು ಎಲ್ಲೆಲ್ಲೂ ಇದ್ದಾನೆ. ನಮಗೆ ಸರಿಯಾದ ಕಾಣುವ ದೃಷ್ಟಿ ಇದ್ದರೆ ಕಾಣಿಸಿಕೊಳ್ಳುತ್ತಾನೆ."

**ಸ್ವಾಮಿ ವಿವೇಕಾನಂದರ ವಾಣಿ**

"ಇದೇ ಎಲ್ಲ ಪೂಜೆಯ ಸಾರಸಂಗ್ರಹ—ಪರಿಶುದ್ಧವಾಗಿ ಇರುವುದು ಮತ್ತು ಇತರರ ಹಿತವನ್ನು ಮಾಡುವುದು. ದರಿದ್ರರಲ್ಲಿ, ಬಲಹೀನರಲ್ಲಿ, ರೋಗಗ್ರಸ್ತರಲ್ಲಿ ಯಾರು ಶಿವನನ್ನು ಕಾಣುತ್ತಾರೋ ಅವನೇ ನಿಜವಾಗಿ ಶಿವನ ಪೂಜೆ ಮಾಡುತ್ತಾನೆ, ಮತ್ತು ಯಾರು ಶಿವನನ್ನು ವಿಗ್ರಹದಲ್ಲಿ ಮಾತ್ರ ನೋಡುತ್ತಾನೊ ಆತನ ಪೂಜೆ ಕಡಿಮೆ ದರ್ಜೆಯ ಪೂಜೆ." **(ಕೃತಿಶ್ರೇಣಿ ೩.೩೩)**

**ಕನಕದಾಸರ ಚರಿತ್ರೆ**

ಕನಕದಾಸರ ಜೀವನದ ಒಂದು ಪ್ರಸಂಗ ಈ ಸತ್ಯವನ್ನು ಒತ್ತಿ ಹೇಳುತ್ತದೆ. ಕನಕದಾಸರು ಕುರುಬರ ಜಾತಿಯವರು. ಸಮಾಜದಲ್ಲಿ ಕೆಲವರು ಇವರನ್ನು ಕೀಳಾಗಿ ಕಾಣುತ್ತಿದ್ದರೂ ಶ್ರೀ ವ್ಯಾಸರಾಯರು ಅವರನ್ನು ಬಹು ಗೌರವದಿಂದ ಕಾಣುತ್ತಿದ್ದರಲ್ಲದೆ ಅವರಿಗೆ ಗುರುವೂ ಆಗಿದ್ದರು. ಕನಕದಾಸರಿಗೆ ಗುರುಗಳು ಈ ರೀತಿ ಗೌರವಾದರಗಳನ್ನು ತೋರುವುದು ಮಠದ ಕೆಲವು ಶಿಷ್ಯರಿಗೆ ಹೊಟ್ಟೆಕಿಚ್ಚು ಉಂಟುಮಾಡಿತು. ಕನಕದಾಸರಿಗೆ ತೊಂದರೆ ಕೊಡುವುದು ಇವರಿಗೆ ಇಷ್ಟವಾದ ಕೆಲಸ. ಕನಕದಾಸರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಅವರೆಲ್ಲ ಕನಕದಾಸರಿಗೆ ಹೇಳಿದರು: "ನೀವು ಹೇಳಿದ ಮಾತನ್ನು ದೇವರು ಕೇಳುತ್ತಾನಂತೆ. ದೇವರಿಗೆ ಹೇಳಿ ನಮಗೆ ಮಠದಲ್ಲಿ ಆತನ ದರ್ಶನ ಮಾಡಿಸಿ!" ಕನಕದಾಸರು "ಆಗಲಿ, ನಾಳೆ ದೇವರು ಮಠಕ್ಕೆ ಬರುತ್ತಾನೆ" ಎಂದರು.

ಮಾರನೆಯ ದಿನ ಎಲ್ಲರೂ ನಿರೀಕ್ಷೆಯಲ್ಲಿದ್ದಾರೆ. ಪೂಜೆಯ ಹೊತ್ತಿಗೆ ಮಠಕ್ಕೆ ಒಂದು ನಾಯಿ ಬಂದಿತು. ಸುಂದರವಾದ, ದೊಡ್ಡ ಜೂಲು ನಾಯಿ. ಆದರೆ ಜನರು ಅದನ್ನು ಹಚಾ ಹಚಾ ಎಂದು ಓಡಿಸಿದರು. ಕನಕದಾಸರು ಮಾತ್ರ ಅದನ್ನು ಆದರಿಸಿದರು. ದಿನ ಕಳೆಯಿತು. ಮಠವಾಸಿಗಳು ದಾಸರನ್ನು ಕೇಳಿದರು : "ನೀವು ನಿಮ್ಮ ಮಾತಿಗೆ ತಪ್ಪಿದಿರಿ, ದೇವರು ಬರಲಿಲ್ಲವಲ್ಲ?" ದಾಸರು "ದೇವರೇ ನಾಯಿಯ ರೂಪದಲ್ಲಿ ಬಂದಿದ್ದ, ನೀವು ಅವನನ್ನು ಗದರಿಸಿ ಓಡಿಸಿದಿರಿ. ದೇವರನ್ನು ನೋಡಲು ಸರಿಯಾದ ದೃಷ್ಟಿ ಇರಬೇಕು" ಎಂದು ಉತ್ತರ ಕೊಟ್ಟರು. ಆಗ ಆ ಜನರು,

"ದೇವರು ಆ ಮೈಲಿಗೆಯ ರೂಪದಲ್ಲಿ ಅಲ್ಲದೆ ಮಡಿಯಾಗಿ ಬರಲಾಗುವುದಿಲ್ಲವೆ? ಮಡಿಯಾಗಿ ಕರೆಸಿರಿ," ಎಂದರು. ದಾಸರು "ಹಾಗೆಯೇ ಆಗಲಿ, ನಾಳೆ ದೇವರು ಮಡಿಯಾಗಿ ಬರುತ್ತಾನೆ" ಎಂದರು. ಮರುದಿನ ಪೂಜೆಯ ಸಮಯದಲ್ಲಿ ಒಂದು ದೊಡ್ಡ ಘಟಸರ್ಪ ಮಠಕ್ಕೆ ಬಂದಿತು. ಎಲ್ಲರೂ ಹಾವು ಹಾವು ಎಂದು ಕೂಗುತ್ತಾ ಓಡಿ ಹೋದರು. ಸರ್ಪ ವ್ಯಾಸರಾಯರ ಹತ್ತಿರ ಹೋಯಿತು. ಅವರು ಅದಕ್ಕೆ ಹಾಲು ನೈವೇದ್ಯ ಮಾಡಿದರು. ಸರ್ಪ ಹಿಂದಕ್ಕೆ ಹೋಯಿತು. ದಾಸರು ಆ ಭಕ್ತರಿಗೆ ಹೇಳಿದರು: "ದೇವರು ಯಾವಾಗಲೂ ಸೌಮ್ಯ ರೂಪದಲ್ಲಿರುವುದಿಲ್ಲ. ಎಲ್ಲ ಜೀವಿಗಳಲ್ಲಿಯೂ ಆತನೇ ಇರುತ್ತಾನೆ. ಅವನನ್ನು ನೋಡಲು ನಮ್ಮ ದೃಷ್ಟಿಗೆ ಶಕ್ತಿ ಬೇಕು, ಅಷ್ಟೆ."

ಉಪಸಂಹಾರ

ಹೀಗೆ ದೇವರನ್ನು ನೋಡಬೇಕಾದರೆ ಎಲ್ಲಿಗೋ ಹೋಗಿ ಅವನನ್ನು ಅರಸಬೇಕಾಗಿಲ್ಲ. ಅವನು ನಮ್ಮ ನಡುವೆಯೇ ಇದ್ದಾನೆ. ಅವನನ್ನು ಗುರುತಿಸಿ ಅವನ ಸೇವೆ ಮಾಡಬೇಕಾದದ್ದು ನಮ್ಮ ಕರ್ತವ್ಯ.

❄

# ಪ್ರಹಸನ ಪ್ರಸಂಗ

ನಾವೊಂದು ಬಗೆದರೆ ದೈವವಿನ್ನೊಂದು ಬಗೆಯುತ್ತದೆ. ಜೀವನದಲ್ಲಿ ಏನೋ ಮಾಡಲು ಹೋಗಿ ಏನೋ ಆಗುವುದು ಅನೇಕರ ಅನುಭವ. ಆದ್ದರಿಂದ ನಾವು ಯಾವುದೇ ಪರಿಣಾಮಗಳಿಗೂ ಮಾನಸಿಕವಾಗಿ ಸಿದ್ಧರಾಗಿರಬೇಕು. ಇಲ್ಲದಿದ್ದರೆ ಕೊನೆಯಲ್ಲಿ ಪರಿತಪಿಸಬೇಕಾಗುತ್ತದೆ.

ಒಬ್ಬ ಧಡೂತಿಯ ಹುಡುಗನಿದ್ದ. ಅವನ ದೇಹ ಅತ್ಯಂತ ಸ್ಥೂಲ. ಶಾಲೆಯಲ್ಲಿ ಎಲ್ಲರೂ ಅವನನ್ನು ಹಾಸ್ಯಮಾಡುತ್ತಿದ್ದರು. ಅಡ್ಡಹೆಸರಿನಿಂದ ಕರೆಯುತ್ತಿದ್ದರು. ಅವನನ್ನು ಕೆಲವರು ನೂರು ಕೆ.ಜಿ. ಎಂದೇ ಕರೆಯುತ್ತಿದ್ದರು. ಇನ್ನು ಕೆಲವರು ಕುಂಬಳಕಾಯಿ ಎಂದು ಕರೆಯುತ್ತಿದ್ದರು. ಅವನಿಗೆ ಇದನ್ನೆಲ್ಲ ಕೇಳಿ ಕೇಳಿ ತುಂಬ ಬೇಸರವಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ.

ಒಂದು ಬಹುಮಹಡಿಯ ಕಟ್ಟಡದ ಹದಿಮೂರನೇ ಮಹಡಿಯಿಂದ ಕೆಳಗೆ ಧುಮುಕಿದ. ಧುಮುಕಿದ್ದಷ್ಟೇ ಅವನಿಗೆ ಗೊತ್ತು. ಮುಂದೊಂದೂ ಅವನಿಗೆ ತಿಳಿಯದು. ಅವನು ಕಣ್ಣು ತೆರೆದು ನೋಡಿದಾಗ ತಾನೊಂದು ಆಸ್ಪತ್ರೆಯಲ್ಲಿರುವುದು ಅವನಿಗೆ ತಿಳಿದು ಬಂತು. ಅವನಿಗೆ ಆಶ್ಚರ್ಯ! ಹೇಗೆ ಹೀಗಾಯಿತು? ದೂರದಲ್ಲಿ ನಿಂತಿದ್ದ ನರ್ಸನ್ನು ಕರೆದು ವಿಚಾರಿಸಿದ:

"ನಾನು ಆಸ್ಪತ್ರೆಗೆ ಹೇಗೆ ಬಂದೆ? ನಾನು ಸಾಯಲಿಲ್ಲವೆ?"

ನರ್ಸ್: "*ಇಲ್ಲ. ನೀನು ಬೀದಿಗೆ ಬೀಳುವಾಗ ಬೀದಿಯಲ್ಲಿ ಹೋಗುತ್ತಿದ್ದ ನಾಲ್ಕು ಜನರ ಮೇಲೆ ಬಿದ್ದು ಅವರು ಸತ್ತು ಹೋದರು. ನೀನು ಬದುಕಿ ಉಳಿದೆ*"

✿✿✿

ಅನೇಕ ಸಂದರ್ಭಗಳಲ್ಲಿ ಸ್ವಾಭಾವಿಕ ತಿಳಿವಳಿಕೆ ತಾಂತ್ರಿಕ ಜ್ಞಾನಕ್ಕಿಂತ ಮಿಗಿಲಾಗಿರುತ್ತದೆ. ನಾವು ತಾಂತ್ರಿಕತೆಗೆ ಅತಿಯಾಗಿ ಒತ್ತನ್ನು ಕೊಡುವುದರ ಮೂಲಕ ಸ್ವಾಭಾವಿಕ ತಿಳಿವಳಿಕೆಯನ್ನು ಕಳೆದುಕೊಳ್ಳುತ್ತೇವೆ.

ಒಂದು ಹೆದ್ದಾರಿ ಕಾಮಗಾರಿ ನಡೆಯುತ್ತಿತ್ತು. ಅನೇಕ ಬಗೆಯ ತಂತ್ರಜ್ಞರು ಅದರಲ್ಲಿ ತೊಡಗಿದ್ದರು. ಒಂದು ಹಳ್ಳಿಯಲ್ಲಿ ಕೆಲಸ ನಡೆಯುತ್ತಿರುವಾಗ ಕೆಲವರು ಹಳ್ಳಿಯವರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು.

ಮಾತಿನ ನಡುವೆ ಒಬ್ಬ ಇಂಜಿನೀಯರ್ ಹಳ್ಳಿಯವನನ್ನು ಕೇಳಿದ, "ನೀವು ರಸ್ತೆ ಮಾಡಬೇಕಾದರೆ ಏನು ಮಾಡುತ್ತೀರಿ?" ಎಂದು.

"ನಾವು ಒಂದು ಊರಿನಿಂದ ಇನ್ನೊಂದು ಊರಿಗೆ ರಸ್ತೆ ಮಾಡಬೇಕಾದರೆ ಒಂದು ಹೇಸರಗತ್ತೆಯನ್ನು ಆ ಊರಿಗೆ ಕಳಿಸುತ್ತೇವೆ. ಅದು ಯಾವ ಹಾದಿಯಲ್ಲಿ ಹೋಗುತ್ತದೋ ಅದೇ ಹಾದಿಯಲ್ಲಿಯೇ ರಸ್ತೆ ತಯಾರಿಸುತ್ತೇವೆ."

"ಹೇಸರಗತ್ತೆ ಸಿಗದೆ ಇದ್ದಾಗ ಏನು ಮಾಡುತ್ತೀರಿ?"— ಇಂಜಿನಿಯರ್ ಕೇಳಿದ.

ಹಳ್ಳಿಯವ ಹೇಳಿದ, "*ಒಬ್ಬ ಇಂಜಿನಿಯರ್‌ನನ್ನು ಕರೆಸುತ್ತೇವೆ*"

✿✿✿

ಅನೇಕವೇಳೆ ನಮ್ಮ ಜಾಣತನವೇ ನಮ್ಮನ್ನು ಪೆದ್ದರನ್ನಾಗಿಸುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ನಮ್ಮ ಜಾಣತನಕ್ಕೂ ಕಾಣ್ಕೆಗೂ ಬಹಳ ಅಂತರವಿರುತ್ತದೆ. ನಮ್ಮ ಜಾಣತನವನ್ನು ಕಡೆಗಣಿಸಿ ಕಾಣ್ಕೆಗೆ ಹೆಚ್ಚು ಒತ್ತನ್ನು ನೀಡಬೇಕಾಗುತ್ತದೆ.

ಒಂದು ಕಡೆ ಒಂದು ಅಪಘಾತ ಸಂಭವಿಸಿತು. ಊರಿನ ಜನ ಭಾರಿ ಪ್ರಮಾಣದಲ್ಲಿ ಸುತ್ತ ನೆರೆದರು. ಅಪಘಾತ ಸ್ಥಳಕ್ಕೆ ಹೋಗುವುದಕ್ಕೇ ದಾರಿ ಇರಲಿಲ್ಲ.

ಪತ್ರಕರ್ತನೊಬ್ಬನು ಅಲ್ಲಿಗೆ ಧಾವಿಸಿದನು. ಅಪಘಾತ ಸ್ಥಳಕ್ಕೆ ಹೋಗುವುದಕ್ಕೆ ಜನ ದಾರಿಯನ್ನೇ ಬಿಡಲಿಲ್ಲ. ಆ ಗುಂಪಿನಲ್ಲಿ ತೂರಿಕೊಂಡು ಹೋದರೆ ಇನ್ನೊಂದು ಅಪಘಾತವೇ ಸಂಭವಿಸಬಹುದೇನೊ ಅನ್ನುವಷ್ಟು ಜನನಿಬಿಡತೆ ಇತ್ತು ಮತ್ತು ಅಷ್ಟೇ ಗಲಭೆಯೂ ಇತ್ತು.

ಪತ್ರಕರ್ತನು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಜೋರಾಗಿ ಕೂಗಿದ: "ನೋಡಿ, ಅಪಘಾತದಲ್ಲಿ ಮಡಿದವನು ನನ್ನ ಮಗ. ದಯವಿಟ್ಟು ದಾರಿ ಬಿಡಿ." ಎಲ್ಲರೂ ಸದ್ದಿಲ್ಲದೆ ದಾರಿ ಮಾಡಿಕೊಟ್ಟರು. ಪತ್ರಕರ್ತನು ತನ್ನ ಜಾಣತನ ಕೆಲಸ ಮಾಡಿತಲ್ಲ ಎಂದು ಒಳಗೊಳಗೇ ಸಂತೋಷಿಸುತ್ತ ಮುನ್ನಡೆದ. ಆದರೆ ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ *ಸತ್ತು ಬಿದ್ದಿರುವುದು ಒಂದು ಕತ್ತೆ ಎಂದು ತಿಳಿದು ಬಂತು.* ✿